

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# 'ಕಾಕದೃಷ್ಟಿ' ಕಾಗೆಯದೋ ಮನುಷ್ಯನದೋ?....

ಎಪ್ಪತ್ತರ ದಶಕ. ಆಗಿನ್ನೂ ಬನಾರಸ್ ಹಿಂದೂ ಯೂನಿವರ್ಸಿಟಿಯಲ್ಲಿ ಓದುತ್ತಿದ್ದ ದಿನಗಳು. ಸಂಶೋಧನಾರ್ಥವಾಗಿ ಕೋಲ್ಕತ್ತಾದ ರಾಷ್ಟ್ರೀಯ ಗ್ರಂಥಾಲಯಕ್ಕೆ ಹೋಗಬೇಕಾಗಿತ್ತು. ಪ್ರಯಾಣಕ್ಕೆ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡು ಬನಾರಸ್ ಕ್ಯಾಂಟ್ ರೈಲ್ವೆನಿಲ್ದಾಣದಲ್ಲಿ ಕುಳಿತು ಕೋಲ್ಕತ್ತಾಗೆ ದೆಹಲಿಯಿಂದ ಬರುವ ರೈಲಿನ ನಿರೀಕ್ಷೆಯಲ್ಲಿದ್ದೆವು. ಈ ಮಧ್ಯೆ ಕೋಲ್ಕತ್ತಾ ಕಡೆಯಿಂದ ದೆಹಲಿಗೆ ಹೋಗುವ ರೈಲು ಬಂತು. ಅದರ ಹೆಸರು Upper India Express. ಈಗ ಇದೆಯೋ ಇಲ್ಲವೋ ಗೊತ್ತಿಲ್ಲ. ಆಗ ಅದು ದಿನವೂ ಕನಿಷ್ಠ ಎರಡು ಗಂಟೆಗಳು ತಡವಾಗಿ ಬರುವ ಕುಖ್ಯಾತಿಯನ್ನು ಪಡೆದಿತ್ತು. ಆದರೆ ಆ ದಿನ ಮಾತ್ರ ಸಮಯಕ್ಕೆ ಸರಿಯಾಗಿ ಬಂದಿತ್ತು. ಆ ರೈಲಿಗೆ ಹೋಗುವ ಪ್ರಯಾಣಿಕನೊಬ್ಬ ದೂರದಿಂದಲೇ ನೋಡಿ ಗಡಿಬಿಡಿಗೊಂಡು ತನ್ನ ಸಾಮಾನು ಸರಂಜಾಮುಗಳೊಂದಿಗೆ ಏದುಸಿರುಬಿಡುತ್ತಾ ಓಡೋಡಿ ಬಂದ. ಅವನು ರೈಲ್ವೆ ಪ್ಲಾಟ್‌ಫಾರಂ ಮೇಲೆ ಕಾಲಿಡುತ್ತಿದ್ದಂತೆಯೇ ರೈಲು ಸೀಟಿಹೊಡೆಯುತ್ತಾ ಚುಕುಬುಕು ಎಂದು ಅವನನ್ನು ಅಣಕಿಸುವಂತೆ ಹೊರಟೇಬಿಟ್ಟಿತು. ಅವನು ಹತ್ತಿಕೊಳ್ಳಲು ಆಗಲಿಲ್ಲ. ಎಂದೂ ನಿರ್ದಿಷ್ಟವಾದ ಸಮಯದಂದು ಬಾರದ ಹಾಳಾದ ರೈಲು ಈ ದಿನ ಸಮಯಕ್ಕೆ ಸರಿಯಾಗಿ ಹೇಗೆ ಬಂತು ಎಂದು ಆ ಪ್ರಯಾಣಿಕ ಸಿಡಿಮಿಡಿಗೊಂಡು 'ಸಾಲಾ ಕಹೀಂ ಕಾ' ಎಂದು ರೈಲನ್ನು ಹಳಿಯುತ್ತಾ 'ಧುತ್' ಎಂದು ಕುಳಿತುಕೊಂಡ. 'ಪತಾ ನಹೀಂ ಸುಬಹ್ ಸುಬಹ್ ಕಿಸ್ ಕಾ ಮುಹ್ ದೇಖಾ ಥಾ, ಗಾಡೀ ಛೂಟ್ ಗಯೀ' (ಬೆಳಿಗ್ಗೆ ಎದ್ದೊಡನೆ ಯಾರ ಮುಖ ನೋಡಿದ್ದೆನೋ ಏನೋ ರೈಲು ತಪ್ಪಿತು) ಎಂದೂ ಸಹ ನಿಂದಿಸತೊಡಗಿದ. ರೈಲು ತಪ್ಪಿದ ಕಾರಣ ರೈಲನ್ನು ಶಪಿಸುತ್ತಾ ನಿರಾಶನಾಗಿ ಕೈಯಲ್ಲಿದ್ದ ಸಾಮಾನುಗಳನ್ನು ಬಿಸಾಡಿ ಕುಳಿತುಕೊಂಡ ಆ ಪ್ರಯಾಣಿಕನನ್ನು ನೋಡಿ ಪಕ್ಕದಲ್ಲಿದ್ದ ಮತ್ತೊಬ್ಬ ಪ್ರಯಾಣಿಕ ಸಮಾಧಾನಪಡಿಸಿದ: 'ಅರೇ ಭಾಯಿ ಗಬಢಾವೋಂ ಮತ್, ಯಹ್ ಆಜ್ ಕೀ ಗಾಡೀ ನಹೀಂ ಥೀಂ, ಕಲ್ ಕೀ ಗಾಡೀ ಥೀಂ, ಆಜ್ ಕೀ ಗಾಡೀ ಅಭೀ ಆನೇವಾಲೀ ಹೈ ಬೈಠೋ' (ಏ ಅಣ್ಣಾ, ಹೆದರಬೇಡ, ಇದು ಇವತ್ತಿನ ರೈಲು ಅಲ್ಲ, ನಿನ್ನೆ ರೈಲು. ಇವತ್ತಿನ ರೈಲು ಇನ್ನೂ ಬರುವುದರಲ್ಲಿದೆ, ಯೋಚನೆಮಾಡಬೇಡ ಕುಳಿತುಕೋ!). ಇದು ಅವನನ್ನು ಸಮಾಧಾನಪಡಿಸಲು ಹೇಳಿದ ಮಾತೋ ಅಥವಾ ನಿಜವಾದ ಸಂಗತಿಯೋ ಸಂಶೋಧನೆ ಮಾಡುವ ಗೊಡವೆಗೆ ಹೋಗಲಿಲ್ಲ! ಅಂತೂ ಹೀಗೆ ತಡವಾಗಿ ಬರುವ ಬಡ ಬೋರೇಗೌಡನಿಗೆ, ರಾಹುಕಾಲ ಗುಳಿಕಾಲ ನೋಡಿ ಮನೆಯಿಂದ ಹೊರಡುವ ಶ್ರೀಮಂತರಿಗೆ ಅನುಕೂಲವಾಗಲೆಂದೇ ನಮ್ಮ ದೇಶದ ರೈಲುಗಳು ವಿಳಂಬವಾಗಿ ಓಡಾಡುತ್ತಿರುವಂತೆ ತೋರುತ್ತವೆ! ಇದು ಪಂಚಾಂಗದ ಕಾಲವಲ್ಲ; ಪತ್ರಿಕಾಕಾಲ. ಇಂದಿನ ಸುಖಪ್ರಯಾಣಕ್ಕೆ ರಾಹುಕಾಲ ಗುಳಿಕಾಲ ನೋಡುವುದಕ್ಕಿಂತ ಪತ್ರಿಕೆಗಳನ್ನು ನೋಡಿ ದಾರಿಯಲ್ಲಿ ಯಾವ ಚಳುವಳಿಗಳೂ ಇಲ್ಲವೆಂಬುದನ್ನು ಖಚಿತಪಡಿಸಿಕೊಂಡು ಹೊರಡುವುದು ಒಳ್ಳೆಯದು.

ರೈಲು ತಪ್ಪಿದ ಪ್ರಯಾಣಿಕ ಸಿಟ್ಟಿನಿಂದ 'ಸಾಲಾ ಕಹೀಂ ಕಾ' ಎಂದು ಶಪಿಸಿದ್ದನ್ನು ಕೇಳಿದಿರಿ. ಹಿಂದಿಯಲ್ಲಿ 'ಸಾಲಾ' ಎಂದರೆ ಯಾರಿಂದಲೋ ತನ್ನ ಆಪತ್ತಿಗೆ ಪಡೆದ 'ಸಾಲ' ಅಲ್ಲ. ಹೆಂಡತಿಯ ಅಣ್ಣತಮ್ಮಂದಿರಿಗೆ 'ಸಾಲಾ' ಎನ್ನುತ್ತಾರೆ. ಧೃತರಾಷ್ಟ್ರನಿಗೆ ರಾಣಿ ಗಾಂಧಾರಿಯ ಅಣ್ಣ ಶಕುನಿ ಇದ್ದಂತೆ. ಹಿಂದಿಯ 'ಸಾಲಾ' ಸಂಸ್ಕೃತದ 'ಶ್ಯಾಲ/ಕ' ಶಬ್ದದ ರೂಪಾಂತರ. ಅದೇನು ಕಾರಣವೋ ಏನೋ ಹಿಂದಿಯಲ್ಲಿ 'ಸಾಲಾ' ಎಂಬ ಶಬ್ದವು ಸಂಬಂಧಸೂಚಕ ಪದವೂ ಹೌದು, ಬೈಗುಳ ಪದವೂ ಹೌದು. ಸಾಲಗಾರನ ಮನೆಗೆ ಸಾಲವಸೂಲಾತಿಗಾಗಿ ಹೋದಾಗ ಸಾಲಕೊಟ್ಟವನಿಗೆ ಎಷ್ಟು ಸಿಟ್ಟು ಇರುತ್ತದೆಯೋ ಆ ಪ್ರಮಾಣದ ಸಿಟ್ಟು ಹಿಂದಿಯಲ್ಲಿ 'ಸಾಲಾ' ಎಂದು ಬೈಯುವ ವ್ಯಕ್ತಿಗೆ ಇರುತ್ತದೆ. ಅದೇನು ಹೆಂಡತಿಯ ಮೇಲಿನ ಸಿಟ್ಟೋ ಅಥವಾ ಶಕುನಿಯಂತಹ ಕುತಂತ್ರ ವ್ಯಕ್ತಿಯನ್ನು ಕಂಡು ಕೆರಳಿದ ಸಿಟ್ಟೋ ತಿಳಿಯದು. ಹೆಂಡತಿಯ ಅಣ್ಣತಮ್ಮಂದಿರು ಮನೆಹಾಳರು, ಅವರನ್ನು ಅಷ್ಟಾಗಿ ಹಚ್ಚಿಕೊಳ್ಳಬಾರದು ಎಂದು ಎಚ್ಚರಿಸುವ ಒಂದು ಸಂಸ್ಕೃತಶ್ಲೋಕವೂ ಇದೆ.

**ದುರ್ಮಂತ್ರೀ ರಾಜ್ಯನಾಶಾಯ ಗ್ರಾಮನಾಶಾಯ ಕುಂಜರಃ ।**
**ಶ್ಯಾಲಕೋ ಗೃಹನಾಶಾಯ ಸರ್ವನಾಶಾಯ ಮಾತುಲಃ ॥**

(ಕೆಟ್ಟಮಂತ್ರಿ ದೇಶವನ್ನು ಹಾಳುಮಾಡುತ್ತಾನೆ, ಆನೆ ಹಳ್ಳಿಯನ್ನು ನಾಶಮಾಡುತ್ತದೆ, ಹೆಂಡತಿಯ ಅಣ್ಣತಮ್ಮಂದಿರು ಮನೆಯನ್ನು ಹಾಳುಮಾಡುತ್ತಾರೆ, ಸೋದರಮಾವನಂತೂ ಎಲ್ಲವನ್ನೂ ಹಾಳುಮಾಡುತ್ತಾನೆ). ಅದೇನೇ ಇರಲಿ, ಕನ್ನಡದಲ್ಲಿ ಮಾತ್ರ ಅಳಿಯ, ಮಾವ ಇತ್ಯಾದಿ ಸಂಬಂಧಸೂಚಕ ಪದಗಳು ಸಂಭಾಷಣೆಯಲ್ಲಿ ವ್ಯಂಗ್ಯವಾಗಿ ಬಳಕೆಯಲ್ಲಿವೆಯೇ ಹೊರತು ಹಿಂದಿಯಂತೆ ಬೈಗುಳವಾಗಿ ಬಳಕೆಯಲ್ಲಿದ್ದಂತೆ ಕಾಣುವುದಿಲ್ಲ. ಭಾಷಾತಜ್ಞರು ಇತ್ತ ಗಮನಹರಿಸಿ ಕನ್ನಡದಲ್ಲಿ ಜಗಳ ಆಡುವವರನ್ನು ಮರೆಯಲ್ಲಿ ನಿಂತು ನೋಡಿ ತೀರ್ಮಾನಿಸುವುದೊಳಿತು.

ಇತ್ತೀಚಿನ ರಾಜಕೀಯ ವಲಯದಲ್ಲಂತೂ ಹಿಂದಿಯ ಈ ನುಡಿಗಟ್ಟು ಸಾರ್ಥಕತೆಯನ್ನು ಪಡೆದಿದೆ. ಕೇಂದ್ರ ರೈಲ್ವೆ ಮಂತ್ರಿ ಲಾಲೂಪ್ರಸಾದ್ ಯಾದವ್ ಹೆಂಡತಿ ರಾಬಡಿದೇವಿಯ ತಮ್ಮ ಸಾಧುಯಾದವ್ ಎಂ.ಪಿ. ಟಿಕೆಟ್ ಸಿಗದ ಕಾರಣ RJD ಪಕ್ಷ ಬಿಟ್ಟು ಕಾಂಗ್ರೆಸ್‌ಪಕ್ಷ ಸೇರಿದ್ದಾರಂತೆ. ದೇಶದ ಎಲ್ಲೆಡೆ ಯಾವ ನೈತಿಕಮೌಲ್ಯಗಳೂ ಇರದ ಇಂತಹ ಕೆಟ್ಟರಾಜಕಾರಣಿಗಳನ್ನು ನಾಡಿನ ನಾಗರಿಕರು ಕಂಡು ಕೆರಳಿ 'ಸಾಲೇ ಕಹೀಂ ಕೇ' ಎಂದು ಶಪಿಸುವುದರಲ್ಲಿ ತಪ್ಪೇನೂ

ಇಲ್ಲ. ಇದು ತೀರಾ ಸಾಧಾರಣ ಬೈಗುಳ, ಭ್ರಷ್ಟರಾಜಕಾರಣಿಗಳಿಗೆ ಇಂತಹ ಬೈಗುಳಗಳೆಲ್ಲಾ ನಾಟುವುದಿಲ್ಲ ಎಂದು ನೀವು ಹೇಳುತ್ತೀರೆಂಬುದು ನಮಗೆ ಚೆನ್ನಾಗಿ ಗೊತ್ತು. ಇಂಥವರನ್ನು 'ಗುಂಡು ಹೊಡೆದು ಸಾಯಿಸಬೇಕು' ಎನ್ನುವ ಉಗ್ರಗಾಮಿಗಳೂ ಇದ್ದಾರೆ. ಹಾಗೆ ಮಾಡಿದರೆ ಅವರು ಜೈಲಿಗೆ ಹೋಗುತ್ತಾರೆ; ಸತ್ತವರ ಹೆಸರಿನ ಅನುಕಂಪೆಯಿಂದ ಅವರ ಸಂಬಂಧಿಗಳು ಗೆದ್ದು ಬರುತ್ತಾರೆ. ಅವರ ಹೆಸರಿನಲ್ಲಿ ಮತ್ತೊಂದು ಭ್ರಷ್ಟ ರಾಜಕೀಯ ಪಕ್ಷ ಹುಟ್ಟಿಕೊಳ್ಳುತ್ತದೆ! ನಿಮ್ಮ ಆಕ್ರೋಶವನ್ನು ಕೇವಲ ಮಾತಿನಲ್ಲಿ ತೋರ್ಪಡಿಸದೆ ಮತದಾನದಲ್ಲಿ ತೋರಿಸಿದರೆ ಈ ರಾಜಕಾರಣಿಗಳು ಸುಧಾರಿಸಿಯಾರು; ದೇಶ ಸುಧಾರಿಸೀತು. "The ballot is stronger than the bullet" ಎಂದು ಹೇಳಿದ ಅಬ್ರಹಾಂ ಲಿಂಕನ್ ಮಾತು ನಿಮ್ಮ ನೆನಪಿನಲ್ಲಿರಲಿ!

ಸುಮಾರು 30 ವರ್ಷಗಳ ಹಿಂದೆ ನಮ್ಮ ಅನುಭವಕ್ಕೆ ಬಂದ ಮತ್ತೊಂದು ಘಟನೆ. ಆ ದಿನಮಾನಗಳಲ್ಲಿ ನಡೆದ ಸಭೆ ಸಮಾರಂಭಗಳಲ್ಲಿ ಪದೇ ಪದೇ ನಮ್ಮ ಭಾಷಣಗಳಲ್ಲಿ ಹೇಳುತ್ತಿದ್ದ ಈ ಮುಂದಿನ ರೋಚಕ ಘಟನೆ ಕೇಳಿದವರಿಗೆ ನೆನಪಾಗಬಹುದು: ನೂರಾರು ಶಾಲಾಕಾಲೇಜುಗಳನ್ನು ನಡೆಸುತ್ತಿರುವ ನಮ್ಮ ವಿದ್ಯಾಸಂಸ್ಥೆಯ ಕೇಂದ್ರಕಛೇರಿಯಲ್ಲಿ ಮೇನೇಜರ್ ಆಗಿದ್ದ ಬುರ್ಲಿ ಶ್ರೀನಿವಾಸಮೂರ್ತಿ ಎಂಬ ಅಧಿಕಾರಿ ಇದ್ದರು. ಚಿತ್ರದುರ್ಗ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಸೇವೆಯಿಂದ ನಿವೃತ್ತರಾಗಿದ್ದ ಅವರು ನಮ್ಮ ಲಿಂಗೈಕ್ಯ ಗುರುವರ್ಯರ ಕಾಲದಿಂದಲೂ ಮತ್ತು ನಮ್ಮ ಕಾಲದಲ್ಲಿಯೂ ಅತ್ಯಂತ ಪ್ರಾಮಾಣಿಕತೆ ಹಾಗೂ ನಿಷ್ಠೆಯಿಂದ ಸೇವೆಯನ್ನು ಸಲ್ಲಿಸಿದವರು. ಬಿಳಿ ಲುಂಗಿಪಂಚೆ ಷರ್ಟು, ಗುಂಡಿ ಹಾಕದ ಹಳೆಯ ಕೋಟು, ತಲೆಯ ಮೇಲೆ ಒಂದು ಕರಿಯ ಟೋಪಿ ಅವರ ಉಡುಗೆ. ನಿಯಮಿತವಾಗಿ ದಿನಕ್ಕೆ ಎರಡು ಸಿಗರೇಟ್ ಸೇದುವ ಅಭ್ಯಾಸವನ್ನು ಬಿಟ್ಟರೆ ಬೇರೆ ಯಾವ ದುರ್ವ್ಯಸನಗಳೂ ಅವರಿಗೆ ಇರಲಿಲ್ಲ. ಶಿಕ್ಷಣ ಇಲಾಖೆಯ ಅಪಾರ ಅನುಭವ ಹೊಂದಿದವರಾಗಿದ್ದ ಅವರು ದಿನನಿತ್ಯ ಬಂದ ಟಪಾಲುಗಳನ್ನು ನೋಡಿ ಅಂದಂದೇ ಉತ್ತರ ಕೊಡುತ್ತಿದ್ದರು. ಅವರ ಹೆಸರಿನ ಮುಂದೆ ದೊಡ್ಡ ದೊಡ್ಡ ಡಿಗ್ರಿಗಳು ಇಲ್ಲದಿದ್ದರೂ ಕನ್ನಡ ಮತ್ತು ಆಂಗ್ಲಭಾಷೆಗಳಲ್ಲಿ ತುಂಬಾ ಪರಿಣತಿಯನ್ನು ಹೊಂದಿದವರಾಗಿದ್ದರು. ಯಾವುದೇ ಪತ್ರಕ್ಕೆ ಉತ್ತರ ಬರೆಯಲು ಕುಳಿತರೆಂದರೆ ಕುಮಾರವ್ಯಾಸನಂತೆ 'ಪದವಿಟ್ಟಳುಪದೊಂದಗ್ಗಳಿಕೆ'ಯ ಬರವಣಿಗೆ ಅವರದು. ಚಿತ್ರದುರ್ಗದಿಂದ ಬೆಳಗಿನ ಬಸ್ಸಿನಲ್ಲಿ ಸಿರಿಗೆರೆಗೆ ಬಂದರೆ ಇಡೀ ದಿನವೆಲ್ಲಾ ಕೆಲಸಮಾಡಿ ಸಂಜೆ ಮತ್ತೆ ಅದೇ ಬಸ್ಸಿನಲ್ಲಿ ಮರುಪ್ರಯಾಣ. ಎಂದೂ ತಮಗೆ ರಜಾ ಬೇಕೆಂದು ಕೇಳಿದವರಲ್ಲ. ಅಂಥವರು ಒಂದು ದಿನ ತುಂಬಾ ಆತಂಕದಿಂದ ನಮ್ಮೆದುರು ಹಾಜರಾದರು. ಮುಖ ಬಾಡಿತ್ತು. ಕೈಯಲ್ಲಿ ಆಗತಾನೇ ಬೆಂಗಳೂರಿನಿಂದ ಅವರ ಅಳಿಯ ಕಳುಹಿಸಿದ್ದ ಒಂದು ಟೆಲಿಗ್ರಾಂ ಇತ್ತು. ವಿಷಯ ಏನೆಂದು ಹೇಳಲೂ ಅವರಿಗೆ ಶಕ್ತಿ ಇಲ್ಲದಂತಾಗಿತ್ತು. ನಡುಗುತ್ತಲೇ ದೈನ್ಯದಿಂದ ನಮ್ಮ ಕೈಗೆ ಟೆಲಿಗ್ರಾಂ ಕೊಟ್ಟರು. "Wife is very serious, start immediately" ಎಂದು ಅವರ ಅಳಿಯ ತುರ್ತುಸಂದೇಶ ಕಳುಹಿಸಿದ್ದ. ಒಬ್ಬಳೇ ಮಗಳು. ಗಂಡುಮಕ್ಕಳು ಇರಲಿಲ್ಲ. 'ಬೇಗನೆ ಹೊರಡಿ, ಹೆದರಬೇಡಿ, ದೇವರ ಅನುಗ್ರಹದಿಂದ ಒಳ್ಳೆಯದಾಗಲಿ' ಎಂದು ಅವರಿಗೆ ಸಮಾಧಾನದ ಮಾತುಗಳನ್ನು ಹೇಳಿ ತಕ್ಷಣವೇ ಬೆಂಗಳೂರಿಗೆ ಕಳುಹಿಸಿದೆವು. ಬೆಂಗಳೂರು ತಲುಪುತ್ತಲೇ ಅಳಿಯನ ಮನೆಗೆ ಧಾವಿಸಿದರು. ಮಗಳಿಗೆ ಏನಾಗಿದೆಯೋ ಏನೋ ಎಂದು ಅವರ ಹೃದಯ ಬಡಿದುಕೊಳ್ಳುತ್ತಿತ್ತು! ಗಾಬರಿಯಿಂದಲೇ ಮನೆಯ ಮುಂದಿದ್ದ ಕರೆಗಂಟೆಯನ್ನೊತ್ತಿದರು. ಆಶ್ಚರ್ಯದ ಸಂಗತಿಯೆಂದರೆ ಮಗಳೇ ಬಂದು ಬಾಗಿಲು ತೆಗೆದಳು. ತಂದೆಗೆ ತಮ್ಮ ಕಣ್ಣುಗಳನ್ನು ನಂಬಲು ಆಗಲಿಲ್ಲ. ಮರುಜೀವ ಬಂದಂತಾಗಿತ್ತು. ಏನಮ್ಮಾ ಏನಾಯಿತೆಂದು ದುಗುಡದಿಂದ ಕೇಳಿದರು. ಗಾಬರಿಯಾಗಬೇಡಪ್ಪಾ, ಬಾ ಒಳಗೆ ಎಂದು ಮಗಳು ತಂದೆಯನ್ನು ಬರಮಾಡಿಕೊಂಡು ಉಪಚರಿಸಿ ಸವಿಸ್ತಾರವಾಗಿ ಹೇಳಿದಳು:

ಮಗಳು ಮತ್ತು ಅಳಿಯ ಇಬ್ಬರೂ ಒಟ್ಟಿಗೆ ಸ್ಕೂಟರ್ ಮೇಲೆ ಹೋಗುತ್ತಿದ್ದರಂತೆ. ಸುಮ್ಮನೆ ದಾರಿ ನೋಡಿಕೊಂಡು ಹೋಗಬೇಡವೇ. ಲಾಲ್‌ಬಾಗ್ ಸಮೀಪ ಬಂದಾಗ ಮರದ ಮೇಲೆ ಎರಡು ಕಾಗೆಗಳು ಕೂಡುವುದನ್ನು ಕಣ್ಣಾರೆ ನೋಡಿದರಂತೆ. ಕಾಗೆಗಳ ಪ್ರಣಯಲೀಲೆಯನ್ನು ನೋಡಿದರೆ ಏನೋ ಕೆಡುಕಾಗುತ್ತದೆಂದು ಯಾರೋ ಹೇಳಿದರು. ಹಾಗಾಗಬಾರದೆಂದರೆ ನಿಮ್ಮ ತೀರಾ ಹತ್ತಿರದ ಬಂಧುಗಳಿಗೆ ಒಂದು ಕೆಟ್ಟ ಸುದ್ದಿಯನ್ನು ಕೊಡಿ ಎಂದು 'ಉಚಿತ' ಪರಿಹಾರವನ್ನೂ ಸೂಚಿಸಿದರು. ಅದರ ಪರಿಣಾಮವೇ ಮಗಳು ಮತ್ತು ಅಳಿಯ ಸಮಾಲೋಚಿಸಿ ಕೊಟ್ಟ ಆ ಟೆಲಿಗ್ರಾಂ! ಟೆಲಿಗ್ರಾಂ ಕೊಡದಿದ್ದರೆ ಮುಂದೆ ಏನಾಗುತ್ತಿತ್ತೋ ಏನೋ, ತಾಯಿಗಂತೂ ಆ ಭಯಾನಕ ಸುದ್ದಿಯನ್ನು ಕೇಳಿ ಆರು ತಿಂಗಳು ಆರೈಕೆ ಮಾಡಿಕೊಳ್ಳುವಂತಾಗಿತ್ತು! ಮಗಳೂ ಅಳಿಯ ಇಬ್ಬರೂ ಸುಶಿಕ್ಷಿತರು. ಆದರೂ ಭವಿಷ್ಯಜೀವನದಲ್ಲಿ ಏನಾಗುವುದೋ ಏನೋ ಎಂಬ ಭಯ ಅವರ ಅಳ್ಳೆದೆಯನ್ನು ಆವರಿಸಿತ್ತು.

ಮೂರನೆಯ ಪ್ರಕರಣ. ಹಳ್ಳಿಯೊಂದರಲ್ಲಿ ಮದುವೆ ಇತ್ತು. ನಕ್ಷತ್ರಬಲ ಕೂಡಿಬರಲಿಲ್ಲವೆಂದು ಲಗ್ನಪತ್ರಿಕೆಯಲ್ಲಿ ವಧುವಿಗೆ ಹೊಸ ಹೆಸರನ್ನು ಇಟ್ಟು ಹುಟ್ಟಿದ ಹೆಸರಾದ 'ಸಾವಿತ್ರಿ'ಗೆ ಬ್ರಾಕೆಟ್ ಸುತ್ತಿದ್ದರು. ವರನಿಗೆ ಹಳೆಯ ಹೆಸರು ಇಷ್ಟವಾಗದೆ ಆಧುನಿಕ ಹೆಸರನ್ನು ಇಟ್ಟಿದ್ದರೆ ನಮ್ಮ ಆಕ್ಷೇಪಣೆಯೇನೂ ಇರುತ್ತಿರಲಿಲ್ಲ. ಆದರೆ ಸಾಲಾವಳಿ ಹೊಂದಲಿಲ್ಲವೆಂದು ವಧುವಿನ ಹೆಸರನ್ನು ಬದಲಾಯಿಸಿದ್ದು ಅದೂ 'ಸಾವಿತ್ರಿ' ಎಂಬ ಸಾಧ್ವಿಯ ಹೆಸರಿಗೆ ಬ್ರಾಕೆಟ್ ಸುತ್ತಿದ್ದು ನಮಗೆ ಕೋಪವನ್ನುಂಟುಮಾಡಿತ್ತು. ಹೆಸರನ್ನು ಬದಲಾಯಿಸಿದ ಮಾತ್ರಕ್ಕೆ ವ್ಯಕ್ತಿಯ ಗುಣಾವಗುಣಗಳು ಬದಲಾವಣೆಯಾಗುತ್ತವೆಯೇ? ವಧೂವರರು ನಮ್ಮ ಆಶೀರ್ವಾದಕ್ಕೆಂದು ಬಂದಾಗ ಸತ್ಯವಾನ್-ಸಾವಿತ್ರಿ ಕಥೆಯನ್ನು ವಿವರಿಸಿ ಮನದಟ್ಟುಮಾಡಿಕೊಟ್ಟೆವು. ವರನನ್ನು ವಿಶ್ವಾಸಕ್ಕೆ ತೆಗೆದುಕೊಂಡು 'ನೋಡು, ನೀನು ಬಹಳ ಕಾಲ ಬದುಕಬೇಕೆಂದಿದ್ದರೆ ನಿನ್ನ ಹೆಂಡತಿಯನ್ನು ಸಾವಿತ್ರಿ ಎಂದೇ ಕರೆ; ಬೇಗನೆ ಸಾಯಬೇಕೆಂದಿದ್ದರೆ ಬ್ರಾಕೆಟ್ ಸುತ್ತು' ಎಂದು ಹೇಳಿ ಅವನನ್ನು ಒಪ್ಪಿಸಿದೆವು. ನಮ್ಮ ಆಶಯದಂತೆ ನಡೆದುಕೊಂಡ ಆ ಯುವಕ ಈಗಲೂ ತನ್ನ ಹೆಂಡತಿಮಕ್ಕಳೊಂದಿಗೆ ಸುಖವಾಗಿದ್ದಾನೆ. ಇಂಥವರನ್ನು ಕಂಡೇ ಬಸವಣ್ಣನವರು ಹೇಳಿದ್ದು:

**ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯಾ**
**ರಾಶಿಕೂಟ ಋಣಸಂಬಂಧವುಂಟೆಂದು ಹೇಳಿರಯ್ಯಾ**
**ಚಂದ್ರಬಲ ತಾರಾಬಲವುಂಟೆಂದು ಹೇಳಿರಯ್ಯಾ**
**ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯಾ**
**ಕೂಡಲಸಂಗಮ ದೇವನ ಪೂಜಿಸಿದ ಫಲ ನಿಮ್ಮದಯ್ಯಾ!**

ಮೇಲಿನ ಮೂರು ಪ್ರಕರಣಗಳಲ್ಲಿ ಮೊದಲನೆಯ ಎರಡು ಪ್ರಕರಣಗಳನ್ನು ತೆಗೆದುಕೊಳ್ಳಿ. ದಿನನಿತ್ಯದ ವ್ಯವಹಾರಗಳಲ್ಲಿ ಆಗದ ಕೆಲಸಕ್ಕೆ ತನ್ನ ದೋಷಗಳೇನೆಂದು ಪರಾಮರ್ಶಿಸದೆ ಬೇರೆಯವರನ್ನು ದೂಷಣೆ ಮಾಡುವುದು ಭಾರತೀಯರ ಹುಟ್ಟುಗುಣ. ಪಾಶ್ಚಾತ್ಯರಲ್ಲೂ ಕುರುಡು ನಂಬಿಕೆಗಳುಂಟು. ಬಾಹ್ಯಾಕಾಶಕ್ಕೆ ಉಡಾಯಿಸಿದ 'ಅಪೋಲೋ-13' ಕೆಟ್ಟು ಕೆಳಕ್ಕೆ ಬೀಳಲು ಕಾರಣ ಅದು 13 ನೇ ನಂಬರಿನ ಬಾಹ್ಯಾಕಾಶ ನೌಕೆಯಾದ್ದರಿಂದ ಹಾಗಾಯಿತೆಂದು ಅಮೇರಿಕೆಯ ಜನತೆ ಉದ್ಗರಿಸಿದರು. ಕೆಲವು ಚರ್ಚುಗಳಲ್ಲಿ 13 ನೇ ಸಂಖ್ಯೆಯ ಬೆಂಚು ಇರುವುದಿಲ್ಲ. ವಿದೇಶೀ ಹೋಟೆಲ್‌ಗಳಲ್ಲಿ 13ನೇ ಸಂಖ್ಯೆಯ ಕೊಠಡಿ ಇದ್ದರೆ ಪ್ರವಾಸಿಗರು ಯಾರೂ ಅದನ್ನು ಇಷ್ಟಪಡುವುದಿಲ್ಲ. ನಮ್ಮ ಜನರಿಗಂತೂ ದಾರಿಯಲ್ಲಿ ಬೆಕ್ಕು ಅಡ್ಡಬರುವಂತಿಲ್ಲ, ಎದುರಿಗೆ ಕಟ್ಟಿಗೆ ಹೊರೆ ಹೊತ್ತ ವ್ಯಕ್ತಿ ಬರುವಂತಿಲ್ಲ. ಕಾರನ್ನು ಸ್ವಲ್ಪಹೊತ್ತು ನಿಲ್ಲಿಸಿ ಮುಂದೆ ಸಾಗುತ್ತಾರೆ. ಆ ಬೆಕ್ಕಿಗೇನು ಗೊತ್ತು ನೀವು ಎಲ್ಲಿಗೆ ಯಾವ ಕೆಲಸಾರ್ಥವಾಗಿ ಹೋಗುತ್ತಿದ್ದೀರೆಂದು? ಸದ್ಯ ನಿಮ್ಮ ಚಾಲಕನ ಬೇಜವಾಬ್ದಾರಿಯಿಂದ ಆ ಬೆಕ್ಕು ಕಾರಿನ ಚಕ್ರಗಳಿಗೆ ಸಿಕ್ಕು ಅಪ್ಪಚ್ಚಿಯಾಗದಿದ್ದರೆ ಅದರ 'ನಶೀಬ' ಚೆನ್ನಾಗಿತ್ತು. ಮುಂಜಾನೆ ಎದ್ದು ಅಡವಿಗೆ ಹೋಗಿ ಭಾರವಾದ ಕಟ್ಟಿಗೆ ಹೊರೆಯನ್ನು ತಲೆಯ ಮೇಲೆ ಹೊತ್ತುಕೊಂಡು ಬಡ ಗ್ರಾಮೀಣ ಮಹಿಳೆ ಬರಿಗಾಲಿನಲ್ಲಿ ಬರುತ್ತಾಳೆ. ಅವಳಿಗೆ ಮಾರುಕಟ್ಟೆಯಲ್ಲಿ ಸರಿಯಾದ ಬೆಲೆ ಸಿಗದಿದ್ದರೆ ಅದಕ್ಕೆ ಕಾಯಕಜೀವಿಯಾದ ಆಕೆ ದಾರಿಯಲ್ಲಿ ನಿಮ್ಮ ಹಾಳುಮುಖವನ್ನು ನೋಡಿದ್ದು ಕಾರಣವಿರಬೇಕೆಂದು ಹೇಳಲು ಬರುತ್ತದೆಯಲ್ಲವೇ? ತನ್ನ ಹೊಟ್ಟೆಪಾಡಿಗೆ ತಲೆಯ ಮೇಲೆ ಕಟ್ಟಿಗೆ ಹೊರೆ ಹೊತ್ತುಕೊಂಡು ಹೋಗುತ್ತಿರುವ ಆಕೆಗೆ ನೀವು ಕಾರಿನಲ್ಲಿ ಹಾಯಾಗಿ ಹೋಗುತ್ತಿರುವ ಬಗ್ಗೆ ಯಾವ ಈರ್ಷ್ಯೆಯೂ ಇಲ್ಲವಲ್ಲ! ಆ ಬಡಪಾಯಿ ಮಹಿಳೆ ಮಾತ್ರ ನಿಮಗೆ ಏಕೆ ಅಪಶಕುನವಾಗಬೇಕು? ದೋಷ ಎಲ್ಲಿದೆಯೆಂದು ಚೆನ್ನಬಸವಣ್ಣನವರ ಈ ಕೆಳಗಿನ ವಚನವನ್ನು ಓದಿ ಚಿಂತಿಸಿರಿ:

**ಭಕ್ತನೆದ್ದು ಭವಿಯ ಮುಖವ ನೋಡಿದರೆ ರೌರವ ನರಕವೆಂಬರು**
**ಭಕ್ತನಾವನು, ಭವಿಯಾವನು, ಬಲ್ಲರೆ ಹೇಳಿರೋ, ಅರಿಯದಿದ್ದರೆ ಕೇಳಿರೋ**
**ಕಾಮ ಒಂದನೆಯ ಭವಿ, ಕ್ರೋಧ ಎರಡನೆಯ ಭವಿ**
**ಲೋಭ ಮೂರನೆಯ ಭವಿ, ಮೋಹ ನಾಲ್ಕನೆಯ ಭವಿ**
**ಮದ ಐದನೆಯ ಭವಿ, ಮತ್ಸರ ಆರನೆಯ ಭವಿ**
**ಇಂತೀ ಷಡ್ವಿಧ ಭವಿತನವ ತಮ್ಮೆದೆಯೊಳಗಿಂಬಿಟುಕೊಂಡು**
**ಭವಿಯ ಮೋರೆಯ ಕಾಣಬಾರದೆಂದು**
**ಮುಖದ ಮೇಲೆ ವಸ್ತ್ರವ ಬಾಸಣಿಸಿಕೊಂಡು ತಿರುಗುವ**
**ಕುನ್ನಿಗಳನೇನೆಂಬೆ ಕೂಡಲಚೆನ್ನಸಂಗಮದೇವ?**

**8.4.2009**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑